ಅಂಚೇ ಇಲಾಖಾ.

ನಂ. 247—137. ತಾರೀಖು 31ನೇ ಆಗಸ್ಟು 1887.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರ ಬೀರ್ವಾರವರ ಅಪ್ಪಣೇ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳ ವೊಳಗೆ ಹೋಬಳೀ ಅಂಚೇ ಆಫೀಸ್‌ಗಳು ಸ್ಥಾಪಿಸಲ್ಪಟ್ಟು ಇರುತ್ತೆ.

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು.
ತಿರುಮಕೂಡ್ಲು ನರಸೀಪುರ	ಹೆಮ್ಮಿಗೆ
ತುಮಕೂರು	ನೆಲಹಾಲ್

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಕೊಡಗು.

ನೋ ಟಿ ಸ್.

ತಾರೀಖು 1ನೇ ಆಗಸ್ಟ್ 1887.

ಕೊಡಗು ಫಾರೆಸ್ಟ್ ಉತ್ಪತ್ತೀ ಬಾಬತು ಈ ಕೆಳಗೆ ಕಂಡ ನಾಟಾ ವಗೈರೇ ಸಾಮಾನುಗಳು ಸ್ ಸ್ 1887ನೇ ಇಸವಿ ಸೆಪ್ಟಂಬರ್ ತಾರೀಖು 1ರಲ್ಲು ಹುಣಸೂರಲ್ಲಿ ಹರಾಜ್, ಮೂಲಕ ವಿಕ್ರಯಿಸಲ್ಪಡುತ್ತವೆ.

1115	ನಾಟಾಗಳು	ತ್ಯಾಗ	30355 ಸಲೆ ಅಡಿ
10	ಕುಯಿದ ಬಾಬತು	ಸದರೀ	449 ,,
63	ಹಲಿಗೆಗಳು	ಸದರೀ	559 ,,
167	ನಾಟಾಗಳು	ಹೊನ್ನೆ	3442 ,,
38	ಸದರೀ	ಬೀಟೆ	877 ,,
32	ಸದರೀ	ನಂದಿ	755 ,,
144	ಸದರೀ	ಮತ್ತೀ ವಗೈರೇ	3266 ,,

25 ಗಾಡಿ ಜೋಜಾ ತ್ಯಾಗದ ಸರಗಳು.

ಮೈಸೂರಿಂದ ಹುಣಸೂರಿಗೆ ಸಲೀಸಾಗಿ ತಲಪಬಹುದು. ಅಲ್ಲಿಂದ ಅಲ್ಲಿಗೆ 27 ಮೈಲ್ ದೂರವಿದೆ, ಮತ್ತು ವಳ್ಳೀ ರಸ್ತೆಯೂ ಇರುತ್ತದೆ.

ತ್ಯಾಗದ ನಾಟಾಗಳಲ್ಲಿ ದೊಡ್ಡ ತೊಲೆಗಳು ಅನೇಕ ಇರುತ್ತವೆ. ಕಳದ ಎರಡು ಹರಾಜುಗಳಲ್ಲಿ ತ್ಯಾಗ ಸಲೆಅಡಿ ವಂದಕ್ಕೆ 13 ಆಣ.; ಹೊನ್ನೆ 0—10—7; ಬೀಟೆ 0—10—6; ನಂದಿ 0—5—10; ಮತ್ತಿ 0—6—11 ಈ ಮೇರೆ ದರಗಳಲ್ಲಿ ಮಾರಲ್ಪಟ್ಟವು. ಷರತ್ ಎಂದಿನಂತೆ ವುಳ್ಳದ್ದಾಗಿ ಹರಾಜು ಮುಂಚೆ ಓದಿ ತಿಳಿಸಲ್ಪಡುವದು.

ಎಫ್. ಜಿ. ಡಿಕ್ರೆಸ್ಸ್,
ಡೆಪ್ಯೂಟಿ ಕ್ಷನರೇಟರ್, ಫಾರೆಸ್ಟ್ಸ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾಪ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂಡ್‌ವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ನೇಟಿವ್ ವುದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ. 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.